> ನಾನು ಹೊಸ ಕವಿಗಳನ್ನು ತುಂಬಾ ಓದುತ್ತೇನೆ. ಯಾಕೆಂದರೆ ಬದಲಾಗುತ್ತಿರುವ ಜೀವನದ ಬಿಂಬಗಳು ಮೊದಲಿಗೆ ಕಂಡುಬರುವುದು ಇಂಥ ಹೊಸ ಕವಿಗಳಲ್ಲಿ ಮಾತ್ರ.

ಬರೆಯತೊಡಗಿದ್ದಾರೆ. ನಿಜಕ್ಕೂ ಹಿಂದಿ ಕಾವ್ಯವನ್ನು ಸಮೃದ್ಧಗೊಳಿಸಿದ್ದಾರೆ. ನಮ್ಮ ಹಿಂದಿಯ ಮೂಲ ಕವಿ ಅಂದರೆ ಖಡೀಬೋಲಿಯ ಕವಿ ಸರಹಾಪಾ. ಅಮೀರ್ ಖುಸ್ರು ಅವರನ್ನೂ ನೆನಪಿಸಿಕೊಳ್ಳಬೇಕು. ಅಲ್ಲಿಂದ ಇಲ್ಲಿವರೆಗೆ ಹಿಂದಿ ಕಾವ್ಯ ಸಾಗಿಬಂದಿದೆ. ಸರಹಾಪಾ ಒಬ್ಬ ಆದಿವಾಸಿ ಮಹಿಳೆಯನ್ನು ವಿವಾಹವಾದರು. ಅವರು ಮೂಲತಃ ಬ್ರಾಹ್ಮಣರು. ಅವರ ಕಾವ್ಯದಲ್ಲಿ ಆದಿವಾಸಿ ಜೀವನದ ಚಿತ್ರಗಳು ಬರುತ್ತವೆ. ಅವರು ನಲಂದಾದಲ್ಲಿದ್ದರು. ಅವರ ಕೊಡುಗೆ ದೊಡ್ಡದು. ಇಲ್ಲಿಯೇ ನಾನು ಹೇಳಬೇಕಾದ ಮಾತೊಂದಿದೆ. ಸ್ತ್ರೀ, ದಲಿತ ಮತ್ತು ಆದಿವಾಸಿ ಕವಿಗಳು ಮುಂದೊಂದು ದಿನ ಕೇವಲ ಕವಿಗಳಾಗಿ ಕಾಣಿಸಿಕೊಂಡರೆ ಅದು ಅವರ ನಿಜವಾದ ಯಶಸ್ಸು. ಅವರ ಹಿನ್ನೆಲೆಗಳೆಲ್ಲ ಕಳಚಿಹೋಗಬೇಕು. ಈಗ ಅಕ್ಕಮಹಾದೇವಿಯನ್ನು ನಾವ್ಯಾರಾದರೂ ಸ್ತ್ರೀ ಕವಿ ಅಂತ ಓದುತ್ತೇವೆಯೇ? ಆಂಡಾಳ, ಮೀರಾ, ಲಲ್ಲೇಶ್ವರಿ, ಮಹಾದೇವಿ ಮರ್ಮಾ ಇವರೆಲ್ಲರಿಗೆ ಆ ಹಣೆಪಟ್ಟಿ ಬೇಕಿಲ್ಲ. ಎಲ್ಲರ ಕಾವ್ಯಗಳೂ ಹೀಗಾಗಬೇಕು. ಹೆಸರಿನ ನಂತರದ ಅಥವಾ ಮೊದಲಿನ ಎಲ್ಲಾ ವಿಶೇಷಣಗಳು ಹೋಗಬೇಕು. ತಮ್ಮ ಹಣೆಪಟ್ಟಿ, ಕರ್ಣಕುಂಡಲ, ಕಿರೀಟ, ವಸ್ತ್ರಗಳನ್ನು ಕಳಚಿಕೊಳ್ಳಬೇಕು. ಅದು ಸ್ವತಂತ್ರ, ಮುಕ್ತ, ನಗ್ನವಾಗಬೇಕು. ಹಿಂದಿ ಕಾವ್ಯ ಹಾಗಾಗಲಿ ಅನ್ನೋದು ನನ್ನ ಆಸೆ.

◆ **ನೀವು ಹಿಂದಿಯ ಪ್ರಸಿದ್ಧ ಸಾಹಿತ್ಯ ಪತ್ರಿಕೆಯಾದ 'ಆಲೋಚನಾ'ದ ಸಂಪಾದಕರಾಗಿ ಕಾರ್ಯನಿರ್ವಹಿಸಿದಿರಿ. ನಾಮವರ್ ಸಿಂಗ್ ಅವರಂಥ ದಿಗ್ಗಜ ವಿಮರ್ಶಕರು ಇದನ್ನು ಆರಂಭಿಸಿದ್ದರು. ಈ ಪತ್ರಿಕೆಯ ಸಂಪಾದಕರಾಗಿ ದುಡಿದ ಅನುಭವ ಹೇಗಿತ್ತು?**

ಇದರ ಪ್ರಧಾನ ಸಂಪಾದಕ ನಾಮವರ್ ಸಿಂಗ್ ಅವರೇ ಆಗಿದ್ದರು. ನಾನು ಕೇವಲ ಸಹಾಯಕ ಸಂಪಾದಕನ ತರಹ ಇದ್ದೆ. ಅನೇಕ ಹೊಸ ಪ್ರಯೋಗಗಳನ್ನು ಮಾಡಿದೆವು. ಆದರೆ ನನಗೆ ಸಮಾಧಾನವೇ ಇರಲಿಲ್ಲ. ಕಳೆದ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಅನಿಸಿದ್ದೇನೆಂದರೆ, ಹಿಂದಿಯ ವಿಮರ್ಶೆಯಲ್ಲಿ ಒಂದು ಕುಸಿತ ಆರಂಭವಾಗಿದೆ ಅಂತ. ಇದು ಹಿಂದಿ ಸಮಾಜದಲ್ಲೂ ಇದೆ. ನಾಮವರ್ ಸಿಂಗ್ ಸದಾ ಎಫ್.ಆರ್. ಲಿವೀಸ್ ಅವರ ಮಾತು ಉಲ್ಲೇಖಿಸುತ್ತಿದ್ದರು: 'ವಿಮರ್ಶಕರಾದವರು ತೀವ್ರವಾದ ಪರೀಕ್ಷೆಗೆ ಒಳಪಡಿಸದೆ ಯಾವುದೇ ಕೃತಿಯ ಶ್ರೇಷ್ಠತೆಯನ್ನು ಒಪ್ಪಬಾರದು. ನಾನು ಈ ಕೃತಿಗಾಗಿ ಪ್ರಾಣವನ್ನು ಪಣಕ್ಕಿಡಬಲ್ಲೆ ಎಂಬ ಭಾವನೆ ಉಂಟಾದಾಗ ಮಾತ್ರ ಅದರ ಶ್ರೇಷ್ಠತೆಯನ್ನು ಮನಗಾಣಿಸಲು ಹೊರಡಬೇಕು.' ಆದರೆ, ಏನಾಗುತ್ತಿತ್ತು ಅಂದರೆ, ವಿಮರ್ಶೆಗಳೆಲ್ಲಾ ಒಂದು ರೀತಿಯಲ್ಲಿ ದೀರ್ಘವಾದ ಲೆಟರ್ ಆಫ್ ಅಪ್ರಿಸಿಯೇಶನ್ಸ್ ತರಹ ಪ್ರಕಟಗೊಳ್ಳುತ್ತಿದ್ದವು. ಪ್ರಕಟವಾದ ಕೃತಿಗಳೆಲ್ಲಾ ಕಾಲದ ಪರೀಕ್ಷೆ ಗೆಲ್ಲದೆ ಮಹಾನ್ ಕೃತಿಯೆಂದು ಹಣೆಪಟ್ಟಿ ಧರಿಸತೊಡಗಿದವು. ಕೃತಿಗಳನ್ನು ಪರೀಕ್ಷಿಸಲು ಬೇಕಾದ ವಿಮರ್ಶಾ ವಿವೇಕ ನಷ್ಟಗೊಳ್ಳತೊಡಗಿತ್ತು. ರಾಮಧಾರಿಸಿಂಗ್ ದಿನಕರರಂಥ ಕವಿಗಳನ್ನೂ ಆ ಕಾಲದ ವಿಮರ್ಶಕರು ವಿಮರ್ಶಿಸದೆ ಬಿಡಲಿಲ್ಲ. ಈಗ ಅಂಥ ಸಂವಾದ ವಿವಾದ ವಾಗ್ವಾದಗಳನ್ನು ಹುಟ್ಟುಹಾಕಬಲ್ಲ ಪ್ರತಿಭೆ ಕ್ಷೀಣಿಸುತ್ತಿದೆ. ಯಾವ ಸಮಾಜದಲ್ಲಿ ಸಂವಾದಗಳು ನಾಶವಾಗುತ್ತವೋ ಅದರ ಪ್ರಶ್ನೆಗಳು, ಚರ್ಚೆಗಳು, ತರ್ಕಗಳು ಮೊಂಡಾಗುತ್ತವೆ. ಒಂದು ಒಳ್ಳೆಯ ಬರಹದ ಸ್ವಭಾವವನ್ನು ಅರಿಯದ ವಿಮರ್ಶಕರು, ಒಂದು ಒಳ್ಳೆಯ ಸಮಾಜದ ಕನಸನ್ನೂ ಕಾಣಲಾರರು. ಇದರ ಜೊತೆಗೆ ವಿಮರ್ಶೆಯನ್ನು ಸಹಿಸಿಕೊಳ್ಳುವ ಶಕ್ತಿ ಕೂಡ ಕುಸಿದಿದೆ. ಎರಡೂ ಕಡೆ ಉಂಟಾಗುತ್ತಿರುವ ತೊಡಕಿದು. ಇದರರ್ಥ, ನಮ್ಮ ಸಾಹಿತ್ಯ ಮತ್ತು ಸಮಾಜ ಗಂಭೀರವಾದ ಅನಾರೋಗ್ಯಕ್ಕೆ ತುತ್ತಾಗುತ್ತಿದೆ. ●